# ಈಶ್ವರಬಳ್ಳಿ: ಈಗೆಲ್ಲಿ?



**ಕೀಟಗಳ ಕಡಿತದಿಂದ ಹಿಡಿದು ಹಾವಿನ ಕಡಿತದ ಚಿಕಿತ್ಸೆಯ ತನಕ ಇದರ ಬೇರಿನ ಉಪಯೋಗಗಳಿವೆ. ನರಮಂಡಲವನ್ನು ಉತ್ತೇಜಿಸುವ ಗುಣವೂ ಈ ಸಸ್ಯಕ್ಕಿದೆ.**

ಚಿತ್ರ- ಬರಹ:
**ಹರೀಶ್ ಹಳೆಮನೆ**

ಆಯುರ್ವೇದ ವನಸ್ಪತಿಗಳಲ್ಲಿ ಈಶ್ವರ ಬಳ್ಳಿ ಅಥವಾ ಈಶ್ವರ ಬೇರು ಇತ್ತೀಚೆಗೆ ಪ್ರಾಮುಖ್ಯತೆ ಪಡೆದುಕೊಂಡಿದೆ. ಭಾರತದ ಹೆಚ್ಚಿನೆಲ್ಲ ಕಡೆಗಳಲ್ಲೂ ಇದೇ ರೀತಿಯ ಹೆಸರು ಬಳಕೆಯಲ್ಲಿದೆ. ನಮ್ಮ ಸುತ್ತಮುತ್ತ ಇರುವ ಇಂತಹ ಅನೇಕ ಗಿಡಮೂಲಿಕೆಗಳು ಗುರುತಿಸಲಾರದೆ ನಾಶವಾಗಿ ಹೋಗುತ್ತಿವೆ.

ನಮ್ಮ ದೇಶದ ಹೆಚ್ಚಿನ ಎಲ್ಲಾ ಭಾಗಗಳಲ್ಲೂ ಬೆಳೆಯುವ ಬಳ್ಳಿ ಇದು. ಹಳ್ಳಿಗಳಲ್ಲಿ, ಕಾಡಿನಂತಹ ಪರಿಸರಗಳಲ್ಲಿ ಯಾವುದಾದರೂ ಪೊದರುಗಳನ್ನು ಆಶ್ರಯಿಸಿ ಬೆಳೆಯುವ ಈಶ್ವರಬಳ್ಳಿಯ ಸಸ್ಯಶಾಸ್ತ್ರೀಯ ಹೆಸರು 'ಅರಿಸ್ಟೋಲೋಕಿಯಾ ಇಂಡಿಕಾ'. ಇದರ ಬೇರಿನಿಂದ ಹಿಡಿದು ಎಲೆ, ಕಾಯಿ ಎಲ್ಲವೂ ಕಡು ಕಹಿ. ಅಂಡಾಕಾರದ ಚಿಕ್ಕ ಚಿಕ್ಕ ಎಲೆಗಳು. ನೇರಳೆ ಬಣ್ಣದ ಹೂಗಳು. ಕಾಯಿಗಳು ಉರುಟಾಗಿದ್ದು ಒಣಗುವವರೆಗೂ ಬಳ್ಳಿಯಲ್ಲಿರುತ್ತವೆ.

ಒಣಗಿದ ಕಾಯಿಗಳ ಹೊರಭಾಗ ಬೆಂಡೆ ಕಾಯಿಗಳಂತೆ ಒಡೆಯುತ್ತವೆ. ಕೆಲವೊಮ್ಮೆ ಇದರಿಂದಲೇ ಬೀಜಗಳು ಹೊರಗೆ ಹಾರಿ ಬೀಜ ಪ್ರಸಾರವಾಗಿ ಮೊಳಕೆಯೊಡೆಯುತ್ತವೆ. (ಹೆಚ್ಚಾಗಿ ಬೇರಿನ ಮೂಲಕವೇ ಪ್ರಸಾರವಾಗುವ ಬಳ್ಳಿಯಿದು).

(8ನೇ ಪುಟ ನೋಡಿ)